ರೂಪಾಯಿಗಳು. ಆದರೆ ಗೆದ್ದ ಜರ್ಮನ್ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದರೆ ಇದರ ನೂರಾರು ಪಟ್ಟು ಹಣ ಬೇಕಾಗುತ್ತಿತ್ತು.

ನನ್ನ ಸ್ನೇಹಿತರನ್ನು ಕೇಳಿದೆ–'ಈ ಅರಮನೆಗೆ ನಿಮ್ಮದೇ ಹೆಸರನ್ನೇನಾದರೂ ಇಟ್ಟಿದ್ದೀರ?' ಆದರೆ ಆ ಪ್ರಶ್ನೆಯನ್ನು ಕೇಳಿದ ಮೇಲೆ, ನನಗೆ ಈ ಪ್ರಶ್ನೆಯೇ ಸರಿಯಲ್ಲ ಎಂದು ತೋರುತ್ತಿದೆ. ನನಗಂತೂ ಈ ಅರಮನೆ ಒಂದು ದೊಡ್ಡ ಜೀವಂತ ಪ್ರಾಣಿಯ ತರಹ ಕಾಣುತ್ತಿದೆ. ನನಗಂತೂ ಅದು ಒಂದು ಆಕ್ಟೋಪಸ್. ಅದನ್ನು ನಾವು ಸುಮ್ಮನೆ ಪ್ರಜೆಗಳ ಅರಮನೆ ಎಂದು ಕರೆಯುತ್ತೇವೆ. ಅಥವಾ ಈ ನಡುವೆ ಗಣರಾಜ್ಯದ ಅರಮನೆ.

'ಆದರೂ ಇಷ್ಟು ಅಗಾಧವಾಗಿರುವ ಮತ್ತು ನಿಮ್ಮ ನಗರದ ಮಧ್ಯ ಭಾಗದಲ್ಲಿರುವ ಈ ಕಟ್ಟಡಕ್ಕೆ ಏನಾದರೂ ಹೆಸರು ಇರಬೇಕೆಂದು ನಿಮಗೆ ಅನಿಸುವುದಿಲ್ಲವೇ?'

ಅವರು ಹೇಳುತ್ತಾರೆ–

'ಪ್ರಜೆಗಳ ಅರಮನೆಗೆ ಅಡ್ಡ ಹೆಸರು ಇಡಲು ಅದು ತುಂಬಾ ದೊಡ್ಡದು. ಅದೊಂದು ಅನಾಹುತ ಅಥವಾ ದುರಂತ ಎಂದು ಮಾತ್ರ ಕರೆಯಬಹುದು. ನನ್ನನ್ನು ಕೇಳಿದರೆ, ಅದು ನನ್ನ ಪೀಳಿಗೆಯ, ಕಾಲಮಾನದ ದುರಂತ ಎಂದೇ ಹೇಳುತ್ತೇನೆ.'

ಝೆಪೆಲಿನ್ ಎನ್ನುವ ವಾಸ್ತುಶಿಲ್ಪಕ್ಕೆ ಸಂಬಂಧಪಟ್ಟ ಪತ್ರಿಕೆಯ ಸಂಪಾದಕರಾಗಿರುವ ಕಾಂನ್ಸ್ಟಾಂಟಿನ್ ಗೊಯಾಜಿ ಅವರು ಮೊದಲಿನಿಂದಲೂ ಹೇಳುತ್ತಿದ್ದರು, 'ನೀವು, ಪಾಶ್ಚಿಮಾತ್ಯ ಪತ್ರಕರ್ತರಿದ್ದೀರಲ್ಲ, ನಿಮಗೆ ಆ ಅರಮನೆಯನ್ನು ಕಂಡರೆ ದುಷ್ಟತನವನ್ನೇ ಕಂಡಂತಾಗುತ್ತದ್ದಲ್ಲ? ಆ ದೃಷ್ಟಿ ಸಮತೂಕದ್ದು ಎನಿಸುವುದಿಲ್ಲ.'

ಆದರೆ ಆ ಸಂಭಾಷಣೆಯ ಕೊನೆಯಲ್ಲಿ ಅವರು ಹೇಳಿದರು:

'ನಗರದ ಇನ್ನೊಂದು ಭಾಗದಲ್ಲಿದೆಯಲ್ಲ, ಆ ಸಾಂಸ್ಕೃತಿಕ ಕೇಂದ್ರವನ್ನು ನೋಡಿದರೆ ನಿಮಗೆ ಅಸಡ್ಡೆ. ಅದು ಈ ಪ್ರಜೆಗಳ ಅರಮನೆಗಿಂತ ಐದು ಪಟ್ಟು ಚಿಕ್ಕದಿರಬಹುದು. ಆದರೆ ಅದನ್ನು ನೀವು ಅನುಭವಿಸಬಹುದು. ನಿಮ್ಮ ಪರಿಧಿಯೊಳಗೇ ಇದೆ ಎಂದು ನಿಮಗನಿಸುತ್ತದೆ. ಆದರೆ ನೋಡಿ, ಈ ಪ್ರಜೆಗಳ ಅರಮನೆ ಇಡೀ ಬುಖಾರೆಸ್ಟ್ ನಗರದ ದಕ್ಷಿಣ ಭಾಗವನ್ನು ತಿಂದು ಹಾಕಿದೆ. ನಮ್ಮ ನಗರದ ಪ್ರಜ್ಞೆಯನ್ನೇ ಕಬಳಿಸಿಬಿಟ್ಟಿದೆ.'

ಕೆಲವು ವರ್ಷಗಳಿಗೊಮ್ಮೆ, ಈ ಅರಮನೆಯನ್ನು ಜನತೆಯ ಹತ್ತಿರ ತರಲು ಯೋಜನೆಯನ್ನು ಹಾಕಿಕೊಳ್ಳಲಾಗುತ್ತದೆ. ಹೊಸ ಆಲೋಚನೆಗಳೂ ಬೇಕಲ್ಲ? ನವ್ಯಕಲೆಯ ಮ್ಯೂಸಿಯಂ ಒಂದನ್ನು ಅರಮನೆಯ ಎಡಭಾಗದಲ್ಲಿ ಇರಿಸಲಾಯಿತು. ಯೋಜನೆಯೇನೋ ಒಳ್ಳೆಯದೇ. ಅದರೆ ಲೇಖಕ ಸಿಲ್ವಿಯೂ ಡಾನ್ಕೂ ಅವರು ಹೇಳುತ್ತಾರೆ, 'ಈ ಪ್ರಜೆಗಳ ಅರಮನೆ ಅದರ ಜೀವದೊಂದಿಗೆ ಅದನ್ನೂ ನುಂಗಿತು. ಆ ಮ್ಯೂಸಿಯಂ ಈ ಅರಮನೆಯ ಭಾಗವಾದಿದ್ದರಿಂದ ಯಾವ ಕಲಾವಿದರೂ ಇದರಲ್ಲಿ ಪಾಲ್ಗೊಳ್ಳಲು ಇಚ್ಛಿಸಲಿಲ್ಲ. ಮೊದಲನೆಯದಾಗಿ, ಅದು ಬೃಹತ್ತಾದುದ್ದನ್ನು ಮಾತ್ರ ಸ್ವೀಕರಿಸುತ್ತದೆ. ಎರಡನೆಯದಾಗಿ, ಈ ಕಟ್ಟಡದೊಳಗೆ ಕಾಲಿರಿಸುವುದು, ಸರಳವಾಗಿ ಹೇಳುವುದಾದರೆ, ಖಿನ್ನತೆಯನ್ನು ಮೂಡಿಸುವಂಥದ್ದು. ಅದು ನಮ್ಮ ಶಕ್ತಿಯನ್ನೇ ಉಡುಗಿಸುತ್ತದೆ. ಮನುಷ್ಯರನ್ನು ಕುಬ್ಜರನ್ನಾಗಿಸುತ್ತದೆ.'

ನವ್ಯಕಲೆಯ ಮ್ಯೂಸಿಯಂಗೆ ಕಾಲಿಡುವಲ್ಲಿ, ಗೋಡೆಯ ಮೇಲೆ ಕಂಡ ಬರಹ (ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ಬಿಳಿಯ ಅಕ್ಷರಗಳು) 'ಇದು ಕೆಟ್ಟ ದೇವರ ಜಾಗ. ಮುಗ್ಧ ಜನತೆಯ ಮೇಲೆ ನಡೆಸಿದ ಅಸಂಖ್ಯ ಅತ್ಯಾಚಾರಗಳನ್ನು ನೋಡಿರುವ ದೇಗುಲ.' ಶನಿವಾರಗಳಂದೂ ಅಲ್ಲಿಗೆ ಭೇಟಿ